

# ಟೈಪ್‌ಕಾಸ್ಟ್ ಆಗಲಾರೆ

ವರನಟ ರಾಜ್‌ಕುಮಾರ್ ಕುಟುಂಬದ ಮೂರನೇ ತಲೆಮಾರಿನ ಕುಡಿ ವಿನಯ್ ರಾಜ್‌ಕುಮಾರ್ ಸಿನಿಮಾರಂಗದಲ್ಲಿ ತಮ್ಮದೇ ಅನನ್ಯ ಹಾದಿ ರೂಪಿಸಿಕೊಳ್ಳುವ ಪ್ರಯತ್ನದಲ್ಲಿರುವವರು. ಚಿತ್ರರಂಗಕ್ಕೆ ಕಾಲಿಟ್ಟು ಒಂಬತ್ತು ವರ್ಷಗಳು ಕಳೆದಿರುವ ಈ ಅವಧಿಯಲ್ಲಿ ತಮ್ಮನ್ನು ತಾವು ನಿರೂಪಿಸಿಕೊಳ್ಳುವ ಹಂಬಲದಲ್ಲಿರುವವರು.

ಈ ವರ್ಷ ಕೂಡ ಅವರ ನಟನೆಯ ನಾಲ್ಕು ಸಿನಿಮಾಗಳು ಲೈನ್‌ನಲ್ಲಿವೆ. ಆದರೆ ನಂಬರ್‌ಗಳ ಹಿಂದೆ ತಾವೆಂದೂ ಬೀಳುವುದಿಲ್ಲ ಎನ್ನುವುದು ವಿನಯ್ ಅವರ ಮಾತು. ಸಿನಿಮಾರಂಗಕ್ಕೆ ಬಂದು 9 ವರ್ಷ ಕಳೆದಿದ್ದು, ಇದುವರೆಗೂ ಅವರ ನಟನೆಯ ನಾಲ್ಕು ಸಿನಿಮಾಗಳು ಬಿಡುಗಡೆ ಕಂಡಿವೆ. ಇದಕ್ಕೆ ಉತ್ತರಿಸಿರುವ ಅವರು, 'ಪ್ರಾಜೆಕ್ಟ್‌ಗಳ ನಡುವೆ ನಾನು ಸಾಕಷ್ಟು ಬ್ರೇಕ್‌ಗಳನ್ನು ತೆಗೆದುಕೊಂಡೆ. ಜೊತೆಗೆ, ನನ್ನ ತಲೆಯಲ್ಲಿ ನಂಬರ್ ಎನ್ನುವುದು ಇಲ್ಲ. ನಿಧಾನ ನಡೆಯುವುದು ಕೂಡ ನನಗೆ ಸರಿಯೇ ಎನಿಸಿದೆ. ನಟ ಎನ್ನುವುದಕ್ಕಿಂತ ಬಹುಮುಖಿ ಕಲಾವಿದ ಎಂದು ಕರೆಸಿಕೊಳ್ಳಬೇಕೆಂದಿದ್ದೇನೆ' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಪ್ರತಿ ಸಿನಿಮಾದಲ್ಲಿಯೂ ಒಂದೇ ರೀತಿಯ ಪಾತ್ರಗಳನ್ನು ಮಾಡುವ ನಟ ತಾವಾಗದಿರಲು ಎಲ್ಲ ಪ್ರಯತ್ನಗಳನ್ನು ನಡೆಸುವುದಾಗಿಯೂ ಹೇಳಿಕೊಂಡಿದ್ದಾರೆ. 'ಪುನರಾವರ್ತನೆಯಾಗಲು ನನಗೆ ಇಷ್ಟವಿಲ್ಲ. ಟೈಪ್ ಕಾಸ್ಟ್ ಆಗುವ ರಿಸ್ಕ್ ತೆಗೆದುಕೊಳ್ಳಲು ನಾನು ರೆಡಿ ಇಲ್ಲ' ಎಂದಿದ್ದಾರೆ.

ಇದೇ ಸಂದರ್ಭ, ತಮ್ಮ ಜೀವನಕ್ಕೂ ಸಿನಿಮಾಗೂ ಇರುವ ನಂಟಿನ ಕುರಿತು ಮಾತನಾಡಿದ್ದಾರೆ. 'ಕೆಲವೊಮ್ಮೆ ನಮ್ಮ ಅಪ್ಪ, ಚಿಕ್ಕಪ್ಪ ಅಥವಾ ತಾತಾ ಇವರನ್ನು ನೋಡಲು ಶಾಲೆಯಿಂದ ನೇರವಾಗಿ ಫಿಲ್ಮ್ ಸೆಟ್‌ಗಳಿಗೇ ಹೋಗುತ್ತಿದ್ದೆ. ಸೆಟ್ ನನಗೆ ಮನೆಯೇ ಆಗಿಬಿಟ್ಟಿತ್ತು' ಎಂದು ಹೇಳಿದ್ದಾರೆ.

ನಾಲ್ಕನೇ ವಯಸ್ಸಿನಲ್ಲಿದ್ದಾಗ ಮೊದಲ ಬಾರಿ ಕ್ಯಾಮೆರಾ ಎದುರಿಸಿದ್ದ ವಿನಯ್, ಆನಂತರ ಆರು ಸಿನಿಮಾಗಳಲ್ಲಿ ಬಾಲ ಕಲಾವಿದನಾಗಿ ನಟಿಸಿದರು. 2015ರಲ್ಲಿ 'ಸಿದ್ಧಾರ್ಥ' ಸಿನಿಮಾ ಮೂಲಕ ಚಂದನವನಕ್ಕೆ ನಾಯಕನಟನಾಗಿ ಪರಿಚಿತಗೊಂಡರು. ಇದೇ ವರ್ಷ ಅವರ ನಾಲ್ಕು ಸಿನಿಮಾಗಳು ಬಿಡುಗಡೆಗೆ ಸಿದ್ಧಗೊಂಡಿವೆ.

'ಒಂದು ಸರಳ ಪ್ರೇಮಕಥೆ', 'ಅಂದೊಂದಿತ್ತು ಕಾಲ' ಹಾಗೂ ಪೆಪೆ ಬಿಡುಗಡೆಗೆ ಸಿದ್ಧವಾಗಿವೆ. 'ಗ್ರಾಮಾಯಣ' ಸಿನಿಮಾ ಚಿತ್ರೀಕರಣ ನಡೆಯುತ್ತಿದೆ.

# ಉಪೇಂದ್ರ ವ್ಯಾಖ್ಯಾನ

"ಮನುಷ್ಯ ತನ್ನ ಜೀವನದಲ್ಲಿ ಮೂರು ಹಂತಗಳನ್ನು ನೋಡುತ್ತಾನೆ. 'ನಾನು ಸರಿ ಇದ್ದೇನೆ, ಪ್ರಪಂಚ ಸರಿ ಇಲ್ಲ' ಎನ್ನುವ ಒಂದು ಹಂತ. ಆವಾಗ ಒಂದಿಷ್ಟು ಸಿನಿಮಾ ಮಾಡಿದೆ. 'ನನ್ನಲ್ಲೇನೋ ಸಮಸ್ಯೆ ಇದೆ. ಪ್ರಪಂಚ ಸರಿಯಾಗಿದೆ' ಎನ್ನುವುದು ಎರಡನೇ ಹಂತ. ಈವಾಗ 'ನಾನೂ ಸರಿ ಇದ್ದೇನೆ. ಪ್ರಪಂಚವೂ ಸರಿಯಾಗಿದೆ' ಎನ್ನುವ ಹಂತಕ್ಕೆ ಬಂದಿದ್ದೇನೆ. ಹೀಗಿರುವಾಗ ಸುಮ್ಮನೆ ನಟಿಸುತ್ತಾ ಸಾಗಿದೆ. ಆದರೂ ಒಂದು ಶಕ್ತಿ ನನ್ನಿಂದ ಈ ಸಿನಿಮಾ ಮಾಡಿಸಿದೆ. ಈ ಸಿನಿಮಾ ಮಾಡಿರುವುದೇ ಪ್ರೇಕ್ಷಕರು ಮಾತನಾಡಬೇಕು ಎಂದು. 'ಯು' ಎನ್ನುವುದು 'ಐ' ಆಗಬೇಕು. ಎಂದರೆ 'ನೀವೆಲ್ಲರೂ ನಾನು ಆಗಬೇಕು' ಅದೇ ಸಿನಿಮಾ" ತಮ್ಮ 'ಯುಐ' ಸಿನಿಮಾದ ಬಗ್ಗೆ ಹೀಗೆ ಮಾರ್ಮಿಕವಾಗಿ ಮಾತಾಡಿದ್ದಾರೆ ಉಪೇಂದ್ರ.

ಈಚೆಗೆ ಬಹುನಿರೀಕ್ಷಿತ 'ಯುಐ' ಸಿನಿಮಾ ಟೀಸರ್ ಹಾಗೂ ಫಸ್ಟ್‌ಲುಕ್ ಬಿಡುಗಡೆ ಮಾಡಿದ್ದು, ಈ ಸಂದರ್ಭದಲ್ಲಿ ನಟ ಉಪೇಂದ್ರ ಸಿನಿಮಾ ಬಗ್ಗೆ ಹಲವು ಮಾತನಾಡಿದ್ದಾರೆ. ಸಿನಿಮಾದೊಳಗಿನ ಉಪೇಂದ್ರನನ್ನು ಜನರಿಗೆ ಪರಿಚಯಿಸಿದ್ದಾರೆ.

ನಟರಾದ ಉಪೇಂದ್ರ, ರವಿಶಂಕರ್, ಅಚ್ಯುತ್‌ಕುಮಾರ್, ಸಾಧುಕೋಕಿಲ ಈ ಸಿನಿಮಾದಲ್ಲಿ ಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದನ್ನು ಟೀಸರ್ ಸೂಕ್ಷ್ಮವಾಗಿ ಹೇಳಿದೆ. ಇಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ವರ್ಲ್ಡ್‌ನಂತೆ ಉಪೇಂದ್ರ ಅವರು ತಮ್ಮ 'ಯುಐ ವರ್ಲ್ಡ್' ಸೃಷ್ಟಿಸಿದ್ದಾರೆ. ಎಂಟು ಭಾಷೆಗಳಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ.

